# ಸಂಹಿತಾ ಸಂಹಿತೆ

**ಮಾಡೆಲಿಂಗ್‌ನಿಂದ ಸಿನಿಮಾಕ್ಷೇತ್ರಕ್ಕೆ ಬಂದಿರುವ ಬೆಡಗಿ ಸಂಹಿತಾ ವಿನ್ಯಾ, 'ಯಾಕೋ ಬೇಜಾರು' ಎಂದು ಹೊಸ ರಾಗ ಹಾಡುತ್ತಿದ್ದಾರೆ.**

ಮಾಡೆಲಿಂಗ್ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಸಂಹಿತಾ ವಿನ್ಯಾ ಸಿನಿಮಾರಂಗಕ್ಕೆ ಪ್ರವೇಶ ಪಡೆದಿದ್ದು 2017ರಲ್ಲಿ 'ಹಾಲು ತುಪ್ಪ' ಸಿನಿಮಾದ ಮೂಲಕ. ನಂತರ 'ಅಮೃತ ಗಳಿಗೆ', 'ವಿಷ್ಣು ಸರ್ಕಲ್' 'ಸೀತಮ್ಮ ಬಂದಳು ಸಿರಿಮಲ್ಲಿಗೆ ತೊಟ್ಟು' ಸಿನಿಮಾಗಳಲ್ಲಿ ನಟಿಸಿದ್ದಾರೆ. ಅವರು ನಾಯಕಿಯಾಗಿ ನಟಿಸಿದ 'ಯು ಆರ್ ಮೈ ಹೀರೊ' ಎಂಬ ಪ್ಯಾನ್ ಇಂಡಿಯಾ ಸಿನಿಮಾ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ.

ಹೀಗೆ ಒಂದೊಂದೇ ಮೆಟ್ಟಿಲು ಹತ್ತಿಕೊಂಡು ಬಣ್ಣದ ಜಗತ್ತಿನ ಮೇಲುಮಹಡಿಗೆ ಏರುತ್ತಿರುವ ಸಂಹಿತಾ ಈಗ 'ಯಾಕೋ ಬೇಜಾರು' ಅಂತಿದ್ದಾರೆ. ಇಷ್ಟೆಲ್ಲ ಸಿನಿಮಾದಲ್ಲಿ ನಟಿಸಿಯೂ ಬೇಜಾರು ಯಾಕೆ ಎಂದು ಕೇಳಬೇಡಿ. ಅವರು ನಟಿಸಿರುವ ಹೊಸ ಸಿನಿಮಾದ ಹೆಸರು 'ಯಾಕೋ ಬೇಜಾರು'. ಈ ಸಿನಿಮಾದಲ್ಲಿ ನಾಯಕಿಗೆ ಎಷ್ಟು ಬೇಜಾರಾಗತ್ತೋ ಗೊತ್ತಿಲ್ಲ, ಆದರೆ ಪ್ರೇಕ್ಷಕರಿಗಂತೂ ಬೇಜಾರಾಗಲು ಬಿಡುವುದಿಲ್ಲ ಎಂದು ವಿಶ್ವಾಸದಿಂದ ಅವರು ಹೇಳುತ್ತಾರೆ.

ಗಾಲಿ ಲಕ್ಕಿ ನಿರ್ದೇಶನದ 'ಯಾಕೋ ಬೇಜಾರು' ಸಿನಿಮಾವನ್ನು ಅವರು ಒಪ್ಪಿಕೊಳ್ಳಲು ಮುಖ್ಯ ಕಾರಣ ಆ ಸಿನಿಮಾದ ಡೈಲಾಗ್‌ಗಳು. 'ತುಂಬ ಚೆನ್ನಾಗಿ, ಚುರುಕಾಗಿ ಡೈಲಾಗ್‌ಗಳನ್ನು ಬರೆದಿದ್ದರು. ಅದನ್ನು ಕೇಳಿಯೇ ಖುಷಿಯಾಯ್ತು. ಈ ಸಿನಿಮಾದಲ್ಲಿ ನನ್ನದು ಆರ್‌ಜೆ ಪಾತ್ರ. ಇಡೀ ಸಿನಿಮಾದಲ್ಲಿ ಮಾತೇ ಪ್ರಧಾನ. ಸಿನಿಮಾದುದ್ದಕ್ಕೂ ಇರುವ ಪಾತ್ರ ನನ್ನದು. ಹಾಗಾಗಿ ಖುಷಿಯಿಂದಲೇ ಈ ಸಿನಿಮಾ ಒಪ್ಪಿಕೊಂಡಿದ್ದೇನೆ' ಎನ್ನುತ್ತಾರೆ ಸಂಹಿತಾ.

ಒಂದು ಹಾಡಿನ ಚಿತ್ರೀಕರಣ ಹೊರತಾಗಿ ಸಿನಿಮಾದ ಚಿತ್ರೀಕರಣ ಮುಗಿದಿದೆ. ಸಕಲೇಶಪುರದ ಆಸುಪಾಸಿನಲ್ಲಿ ಚಿತ್ರೀಕರಿಸಿರುವ ಈ ಸಿನಿಮಾದಲ್ಲಿ ಪ್ರಕೃತಿ ಸೌಂದರ್ಯವನ್ನು ತುಂಬ ಚೆನ್ನಾಗಿ ಸೆರೆಹಿಡಿಯಲಾಗಿದೆಯಂತೆ. 'ಇದು ಕಾಡ ನಡುವೆಯೇ ನಡೆಯುವ ಚಂದದ ಲವ್ ಸ್ಟೋರಿ. ನಾನು ಇದುವರೆಗೆ ಹೆಚ್ಚಾಗಿ ಮಾಡರ್ನ್ ಲುಕ್‌ನಲ್ಲಿಯೇ ಕಾಣಿಸಿಕೊಂಡಿದ್ದೆ. ಆದರೆ ಈ ಸಿನಿಮಾದಲ್ಲಿ ಸಾಂಪ್ರದಾಯಿಕ ಮಧ್ಯಮವರ್ಗದ ಕುಟುಂಬದ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಅಭಿರಾನವ್ ನಾಯಕನಾಗಿ ನಟಿಸಿದ್ದಾರೆ. ವಿ. ನಂದೀಶ್ ಅವರು ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ' ಎಂದು ವಿವರಣೆ ನೀಡುತ್ತಾರೆ ಅವರು. ಈ ಪಾತ್ರಕ್ಕಾಗಿ ಅವರು, ಆರ್‌ಜೆಗಳ ಮಾತಿನ ಶೈಲಿ, ವಿಷಯವನ್ನು ಮಂಡಿಸುವ ರೀತಿ ಎಲ್ಲವನ್ನೂ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದಾರಂತೆ. 'ಈಗ ಆರ್‌ಜೆ ಕೆಲಸ ಕೂಡ ಮಾಡಬಲ್ಲೆ ಎಂಬ ಆತ್ಮವಿಶ್ವಾಸ ಬಂದುಬಿಟ್ಟಿದೆ' ಎಂದು ನಗುತ್ತಾರೆ ಅವರು.

ಈ ಸಿನಿಮಾದ ಜೊತೆಗೆ ಇನ್ನೆರಡು ಕನ್ನಡ ಸಿನಿಮಾಗಳಲ್ಲಿ ಸಂಹಿತಾ ನಟಿಸುತ್ತಿದ್ದಾರೆ. 'ಒನ್ ಸಿಆರ್' ಎಂಬ ಸಿನಿಮಾದಲ್ಲಿ, ಹಣಕ್ಕೋಸ್ಕರ ಹೊರಟು ಒಂದು ಜಾಲದಲ್ಲಿ ಸಿಲುಕಿಕೊಂಡು ಒದ್ದಾಡುವ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಇದು ಲಾಕ್‌ಡೌನ್ ಕಾಲದಲ್ಲಿ ನಡೆಯುವ ಕಥೆಯಂತೆ. 'ಕೇಸ್ ಆಫ್ ಹಂಸ' ಅವರು ನಟಿಸುತ್ತಿರುವ ಇನ್ನೊಂದು ಸಿನಿಮಾ. ಈ ಸಿನಿಮಾದಲ್ಲಿ ಅವರು ಸಿಬಿಐ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ.

'ಈ ಎರಡೂ ಸಿನಿಮಾಗಳೂ ನನಗೆ ತುಂಬ ಖುಷಿ ಕೊಟ್ಟಿವೆ. ಹಾಗೆಯೇ ನನಗೆ ಹಿಂದಿಯ 'ಪದ್ಮಾವತ್'ನಂಥ ಸಿನಿಮಾಗಳಲ್ಲಿಯೂ ನಟಿಸಬೇಕು ಎಂಬ ಆಸೆ ಇದೆ. ಅವಕಾಶ ಸಿಗುತ್ತದೆ ಎಂಬ ನಂಬಿಕೆಯೂ ಇದೆ' ಎನ್ನುವ ಸಂಹಿತಾಗೆ ಸಿನಿಮಾದಷ್ಟೇ ಮಾಡೆಲಿಂಗ್ ಮೇಲೂ ಪ್ರೀತಿ ಇದೆ. ಫಾರ್‌ಎವರ್ ನವೀನ್‌ಕುಮಾರ್ ಅವರ ವಿನ್ಯಾಸದ ಉಡುಪುಗಳಿಗೆ ಅವರು ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ನವೀನ್ ಅವರೇ ಸಂಹಿತಾರ 'ಯಾಕೋ ಬೇಜಾರು' ಸಿನಿಮಾಗೂ ವಸ್ತ್ರ ವಿನ್ಯಾಸ ಮಾಡಿದ್ದಾರೆ. 'ಮಾಡೆಲಿಂಗ್ ಮತ್ತೆ ಸಿನಿಮಾ ಎರಡೂ ನನ್ನ ಎರಡು ಕಣ್ಣುಗಳಿದ್ದ ಹಾಗೆ. ಎರಡೂ ಕ್ಷೇತ್ರಗಳಲ್ಲಿ ಮುಂದುವರಿಯುತ್ತೇನೆ' ಎನ್ನುವ ಸಂಹಿತಾ, ಸದ್ಯಕ್ಕೆ ತಾನು ಪೂರ್ಣಪ್ರಮಾಣದಲ್ಲಿ ನಾಯಕಿಯಾಗಿ ನಟಿಸಿರುವ 'ಯಾಕೋ ಬೇಜಾರು' ಸಿನಿಮಾದ ಬಿಡುಗಡೆಯನ್ನೇ ಎದುರುನೋಡುತ್ತಿದ್ದಾರೆ. ■

